# ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ ಅಧಿನಿಯಮ, 1999

## ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ಸರ್ಕಾರಿ ಖಾತರಿಗಳ ಮೇಲೆ ಮಿತಿ.
4. ನಿಷೇಧ.
5. ಖಾತರಿ ಕಮಿಷನ್.
6. ಪರ್‌ಫಾರ್‌ಮನ್ಸ್ ಖಾತರಿ.

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1**

**1999ರ ಅಧಿನಿಯಮ ಸಂಖ್ಯೆ 11.**- ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಸರ್ಕಾರಿ ಖಾತರಿಗಳ ಮೇಲೆ ಮಿತಿಯನ್ನು ನಿಗದಿಪಡಿಸುವ ಸಂಬಂಧದಲ್ಲಿ ರಾಜ್ಯ ಹಣಕಾಸು ಕಾರ್ಯದರ್ಶಿಗಳ ತಾಂತ್ರಿಕ ಸಮಿತಿಯ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ರಾಜ್ಯದಲ್ಲಿ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಸರ್ಕಾರದ ಇಲಾಖೆಗಳ, ಸಾರ್ವಜನಿಕ ವಲಯದ ಉದ್ಯಮಗಳ, ಸ್ಥಳೀಯ ಪ್ರಾಧಿಕಾರಗಳ, ಶಾಸನಬದ್ದ ಮಂಡಲಿಗಳ ಮತ್ತು ನಿಗಮಗಳ ಮತ್ತು ಸಹಕಾರ ಸಂಸ್ಥೆ ಮುಂತಾದವುಗಳ ಪರವಾಗಿ ನೀಡಲಾದ ಸರ್ಕಾರಿ ಖಾತರಿಗಳ ಮೇಲೆ ಮಿತಿ ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಶಾಸನವನ್ನು ತರುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

( 1999ರ ವಿಧಾನಸಭಾ ವಿಧೇಯಕ ಸಂಖ್ಯೆ 13 ಕಡತ ಸಂಖ್ಯೆ ಸಂವ್ಯಶಾಇ 13 ಶಾಸನ 99ರಲ್ಲಿದ್ದಂತೆ).

**2**

**2002ರ ಅಧಿನಿಯಮ ಸಂಖ್ಯೆ 15.**– ಕೃಷಿ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್ ಮತ್ತು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಭೂ ಅಭಿವೃದ್ಧಿ ಬ್ಯಾಂಕ್ ಲಿಮಿಟೆಡ್ ಇವು ನೀಡಿದ ಸಾಲಗಳಿಗಾಗಿ 01.04.2001ರಿಂದ 31.3.2002ರ ಅವಧಿಯಲ್ಲಿ ನೀಡಲಾದ ಖಾತರಿಗಳ ಸಂಬಂಧದಲ್ಲಿ ಯಾವುದೇ ಖಾತರಿ ಕಮೀಷನ್ ವಿಧಿಸತಕ್ಕದ್ದಲ್ಲವೆಂಬ ಬಗ್ಗೆ ಮತ್ತು ಸದರಿ ಅವಧಿಯಲ್ಲಿ ಅವು ವಿತರಣೆ ಮಾಡಿದ ಕೃಷಿ ಸಾಲಗಳ ಸಂಬಂಧದಲ್ಲಿ ಅವುಗಳ ಸಾಲ ನೀಡಿಕೆ ದರದಲ್ಲಿ ಶೇಕಡಾ ಒಂದರಷ್ಟು ಬಡ್ಡಿಯನ್ನು ಕಡಿಮೆ ಮಾಡುವಂತೆ ಅವುಗಳನ್ನು ಅಗತ್ಯಪಡಿಸುವ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಸರ್ಕಾರಿ ಖಾತರಿಗಳ ಮೇಲೆ ಮಿತಿ ಅಧಿನಿಯಮ, 1999 ಕ್ಕೆ (1999ರ ಕರ್ನಾಟಕ ಅಧಿನಿಯಮ 11) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2002ರ ವಿಧಾನಸಭೆಯ ವಿಧೇಯಕ ಸಂಖ್ಯೆ 4)

## 1999ರ ಕರ್ನಾಟಕ ಅಧಿನಿಯಮ ಸಂಖ್ಯೆ 11

*(1999ರ ಏಪ್ರಿಲ್ ಇಪ್ಪತ್ತೊಂಬತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ ಅಧಿನಿಯಮ, 1999

*(1999ರ ಏಪ್ರಲ್ ಇಪ್ಪತ್ತಾರನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

ಸರ್ಕಾರಿ ಖಾತರಿಗಳ ಮೇಲೆ ಮಿತಿಯನ್ನು ವಿಧಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಭಂಧ ಕಲ್ಪಿಸುವ ಒಂದು ಅಧಿನಿಯಮ.

ಸರ್ಕಾರಿ ಇಲಾಖೆಗಳು, ಸಾರ್ವಜನಿಕ ವಲಯ ಉದ್ಯಮಗಳು, ಸ್ಥಳೀಯ ಪ್ರಾಧಿಕಾರಗಳು, ಶಾಸನಬದ್ಧ ಮಂಡಲಿಗಳು ಮತ್ತು ನಿಗಮಗಳು ಮತ್ತು ಸಹಕಾರಿ ಸಂಸ್ಥೆಗಳ ಪರವಾಗಿ ನೀಡಲಾದ ಸರ್ಕಾರಿ ಖಾತರಿಗಳ ಮೇಲೆ ಮಿತಿ ವಿಧಿಸುವುದಕ್ಕಾಗಿ ಮತ್ತು ರಾಜ್ಯದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ: –

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದ ಅಂಥ [1][ದಿನಾಂಕದಂದು][1] ಜಾರಿಗೆ ಬರತಕ್ಕದ್ದು.

1. ಈ ಅಧಿನಿಯಮವು ಅಧಿಸೂಚನೆ ಮೂಲಕ ದಿ:29.4.1999ರಂದು ಜಾರಿಗೊಂಡಿದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂಧರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,–

(1) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(2) "ಸರ್ಕಾರಿ ಖಾತರಿ" ಎಂಬುದು, ಇಲಾಖಾ ಉದ್ಯಮಗಳು, ಸಾರ್ವಜನಿಕ ವಲಯ ಉದ್ಯಮಗಳು, ಸ್ಥಳೀಯ ಪ್ರಾಧಿಕಾರಗಳು, ಶಾಸನಬದ್ದ ಮಂಡಲಿಗಳು ಮತ್ತು ನಿಗಮಗಳು ಮತ್ತು ಸಹಕಾರಿ ಸಂಸ್ಥೆಗಳ ಪರವಾಗಿ ರಾಜ್ಯ ಸರ್ಕಾರವು ನೀಡಿದ ಖಾತರಿಯನ್ನು ಒಳಗೊಳ್ಳುತ್ತದೆ;

(3) "ಪರ್‌ಫಾರ್‌ಮನ್ಸ್ ಖಾತರಿ" ಎಂಬುದು ರಾಜ್ಯ ಸರ್ಕಾರದ, ಸ್ಥಳೀಯ ಪ್ರಾಧಿಕಾರಗಳ, ಶಾಸನಬದ್ದ ಮಂಡಲಿಗಳ ಮತ್ತು ನಿಗಮಗಳ ಮತ್ತು ಸಹಕಾರಿ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ಯಮಗಳ ಪರವಾಗಿ ನಿರ್ದಿಷ್ಟ ಕಾರ್ಯನಿರ್ವಹಣೆಯಲ್ಲಿ ಖಾತರಿ ನೀಡಲಾದ ಲೆಟರ್ಸ್‌ಆಫ್‌ಕಂಫರ್ಟ್, ವಿದ್ಯುಚ್ಛಕ್ತಿ ಖರೀದಿ ಒಪ್ಪಂದ, ರಾಜ್ಯ ಬೆಂಬಲ ಒಪ್ಪಂದ, ಮೂಲ ಸೌಲಭ್ಯಗಳ ಯೋಜನೆಗಾಗಿ ರಿಯಾಯತಿ ಒಪ್ಪಂದ ಮತ್ತು ಇತರ ಒಪ್ಪಂದಗಳೇ ಮುಂತಾದ ದಸ್ತಾವೇಜುಗಳನ್ನು ಒಳಗೊಳ್ಳುತ್ತದೆ.

**3. ಸರ್ಕಾರಿ ಖಾತರಿಗಳ ಮೇಲೆ ಮಿತಿ.–** ಯಾವುದೇ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಂದು ಇದ್ದಂತೆ ಸರ್ಕಾರಿ ಖಾತರಿಗಳ ಒಟ್ಟು ಬಾಕಿಗಳು ಕರ್ನಾಟಕದ ಮಹಾಲೇಖಾಪಾಲರ ಪುಸ್ತಕದಲ್ಲಿದ್ದಂತೆ ಕಳೆದ ವರ್ಷದ ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ರಾಜ್ಯದ ರಾಜಸ್ವ ಜಮೆಗಳ ಶೇಕಡ ಎಂಬತ್ತನ್ನು ಮೀರತಕ್ಕದ್ದಲ್ಲ:

ಪರಂತು, ಸರ್ಕಾರಿ ಖಾತರಿಯ ಮೇಲಿನ ಮಿತಿಯು, ಬಚಾವತ್ ಐತೀರ್ಪಿಗನುಸಾರ ಜಲಸಂಪನ್ಮೂಲಗಳ ಬಳಕೆಯ ಉದ್ದೇಶಕ್ಕಾಗಿ ಕೃಷ್ಣಾಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸುವ ಸಲುವಾಗಿ ಯಾವುದೇ ಹೆಚ್ಚುವರಿ ಸಾಲ ಪಡೆಯುವುದಕ್ಕೆ ಅನ್ವಯಿಸತಕ್ಕದ್ದಲ್ಲ.

**4. ನಿಷೇಧ.-** ಯಾವುದೇ ಇತರ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ,-

(1) ಯಾವುದೇ ಖಾಸಗಿ ವ್ಯಕ್ತಿ, ಸಂಸ್ಥೆ ಅಥವಾ ಕಂಪನಿಯ ಸಾಲದ ಸಂಬಂಧದಲ್ಲಿ ಸರ್ಕಾರವು ಖಾತರಿ ನೀಡತಕ್ಕದ್ದಲ್ಲ.

(2) ಸರ್ಕಾರೇತರ ಸಂಪನ್ಮೂಲಗಳಿಂದ ಕೊಡಲಾದ ಷೇರು ಬಂಡವಾಳವು ಉದ್ದೇಶಿತ ಒಟ್ಟು ಈಕ್ವಿಟಿಯ ಶೇಕಡ ಹತ್ತಕ್ಕೆ ಕಡಿಮೆ ಇಲ್ಲದ ಹೊರತು ಸಹಕಾರಿ ವಲಯಕ್ಕೆ ಯಾವುದೇ ಸರ್ಕಾರಿ ಖಾತರಿಯನ್ನು ನೀಡತಕ್ಕದ್ದಲ್ಲ.

**5. ಖಾತರಿ ಕಮಿಷನ್.-** (1) ಸರ್ಕಾರವು ಖಾತರಿ ಕಮಿಷನ್ ಎಂಬುದಾಗಿ ಕನಿಷ್ಠ ಶೇಕಡ ಒಂದರಷ್ಟನ್ನು ವಿಧಿಸತಕ್ಕದ್ದು, ಅದನ್ನು ಯಾವುದೇ ಸಂದರ್ಭದಲ್ಲೂ ಮನ್ನಾ ಮಾಡತಕ್ಕದ್ದಲ್ಲ.

[2][ಪರಂತು, 2001ರ ಏಪ್ರಿಲ್ ಒಂದನೇ ದಿನಾಂಕದಿಂದ 2002ರ ಮಾರ್ಚ್ ಮೂವತ್ತೊಂದನೇ ದಿನಾಂಕದವರೆಗಿನ ಅವಧಿಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ಮತ್ತು ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಭೂ ಅಭಿವೃದ್ಧಿ ಬ್ಯಾಂಕ್ ನಿಯಮಿತ ಇವು ಕೃಷಿಯ ಉದ್ದೇಶಕ್ಕಾಗಿ ನೀಡಿದ ಸಾಲಗಳಿಗಾಗಿ ಸರ್ಕಾರವು ನೀಡಿದ ಖಾತರಿಯ ಸಂಬಂಧದಲ್ಲಿ ಖಾತರಿ ಕಮಿಷನನ್ನು ವಿಧಿಸತಕ್ಕದ್ದಲ್ಲ.

ಮತ್ತು ಪರಂತು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ ಮತ್ತು ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ, ಇವು 2001ರ ಏಪ್ರಿಲ್ ಒಂದನೇ ದಿನಾಂಕದಿಂದ 2002ರ ಮಾರ್ಚ್ ಮೂವತ್ತೊಂದನೇ ದಿನಾಂಕದವರೆಗಿನ ಅವಧಿಯಲ್ಲಿ ಅವುಗಳು ವಿತರಣೆ ಮಾಡಿದ ಎಲ್ಲಾ ಕೃಷಿ ಸಾಲಗಳ ಮೇಲಿನ ಬಡ್ಡಿ ದರದಲ್ಲಿ ಶೇಕಡಾ ಒಂದರಷ್ಟು ಕಡಿಮೆ ಮಾಡತಕ್ಕದ್ದು.][2]

(2) ಯೋಜನೆಗೆ ಸಂಬಂಧಿಸಿದಂತೆ ಹಣ ಪಾವತಿ ಮಾಡಲು ತಪ್ಪುವ ಅಪಾಯವನ್ನು ಅವಲಂಬಿಸಿ ಸರ್ಕಾರವು, ಅಧಿಸೂಚನೆ ಮೂಲಕ, ಹೆಚ್ಚಿಸಿದ ದರದಲ್ಲಿ ಕಮಿಷನ್ನನ್ನು ನಿರ್ದಿಷ್ಟಪಡಿಸಬಹುದು.

***ವಿವರಣೆ.*** - ಈ ಪ್ರಕರಣದ ಉದ್ದೇಶಕ್ಕಾಗಿ 'ಹಣ ಪಾವತಿ ಮಾಡಲು ತಪ್ಪುವ ಅಪಾಯ' ಎಂದರೆ, ಯಾವ ಸಾಲಗಾರನ ಪರವಾಗಿ ಸರ್ಕಾರಿ ಖಾತರಿಯನ್ನು ನೀಡಲಾಗಿದೆಯೋ, ಆತನು, ಸಾಲ ಪಡೆದ ಮೊಬಲಗು, ಕೈಗಾರಿಕೆಯ ಸ್ವರೂಪ, ಹಣಕಾಸಿನ ಪರಿಸ್ಥಿತಿಗಳನ್ನು ಅವಲಂಬಿಸಿ, ಹಣ ಪಾವತಿ ಮಾಡಲು ತಪ್ಪುವ ಸಂಭಾವ್ಯತೆ.

**6. ಪರ್‌ಫಾರ್‌ಮನ್ಸ್ ಖಾತರಿ.-** (1) ಮೂಲ ಸೌಲಭ್ಯಗಳ ಯೋಜನೆಯ ಅಭಿವೃದ್ಧಿಯ ಹಿತಾಸಕ್ತಿಯಲ್ಲಿ, ಸರ್ಕಾರವು ಅಂಥ ಎಲ್ಲ ವಲಯಗಳಿಗೆ ಪರ್‌ಫಾರ್‌ಮನ್ಸ್ ಖಾತರಿ ನೀಡುವುದನ್ನು ಮುಂದುವರಿಸಬಹುದು.

(2) ಸರ್ಕಾರವು, ಪರ್‌ಫಾರ್‌ಮನ್ಸ್ ಖಾತರಿಯಲ್ಲಿ ಹೇಳಿದ ಒಪ್ಪಂದ ಹೊಣೆಗಾರಿಕೆಯನ್ನು ಭರಿಸುವುದಕ್ಕೆ ರಾಜ್ಯವು ವಿಫಲವಾದಲ್ಲಿ, ರಾಜ್ಯವು, ಭವಿಷ್ಯದಲ್ಲಿ ಭರಿಸಬಹುದಾದ ಹೊಣೆಗಾರಿಕೆಗಳ (ರೂಪಾಯಿಗಳಲ್ಲಿ) ಮೇಲಿನ ವ್ಯಾಪಕ ವರದಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

(3) (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ವರದಿಯನ್ನು ಪರ್‌ಫಾರ್‌ಮನ್ಸ್ ಖಾತರಿ ನೀಡಿದ ದಿನಾಂಕದಿಂದ ಆರು ತಿಂಗಳ ಒಳಗೆ ಮಂಡಿಸತಕ್ಕದ್ದು.

* * * *

**ಅಧಿಸೂಚನೆ**

**ಬೆಂಗಳೂರು, ದಿನಾಂಕ 5.6.1999 [ಅಇ 3 ಅರ್‌ಎಲ್‌ಜಿ 99]**

ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 1ರ ಉಪ-ಪ್ರಕರಣ (2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು 29.೦4.1999 ದಿನಾಂಕದಂದು ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಯಲ್ಲಿ ಬರತಕ್ಕದ್ದು ಎಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎನ್. ಎಸ್. ನಾಗರಾಜನ್)
ವಿಶೇಷಾಧಿಕಾರಿ,
ಆರ್ಥಿಕ ಇಲಾಖೆ, ಡಿಐಜಿಎಂ ಕೋಶ

* * * *